ಆದರೆ ನನ್ನ ಜೊತೆ ಬಂದು ಬಿಡು, ಹೂವಿನ ಹಾಗೆ ನೋಡಿಕೊಳ್ಳುತ್ತೇನೆ. ಡಿವೋರ್ಸ್ ಕಷ್ಟ ಅಂದರೆ ಹೇಳು ಅವನನ್ನು ಸಾಯಿಸಿ ಬಿಡುತ್ತೇನೆ. ಈಗ ಎಷ್ಟು ಹೆಂಗಸರು ಪ್ರಿಯಕರನ ಜೊತೆ ಸೇರಿ ಗಂಡನನ್ನು ಸಾಯಿಸ್ತಿಲ್ಲ ಹೇಳು' ಎಂದು ಅವಳ ಸೊಂಟದ ಸುತ್ತ ಕೈ ಹಾಕಿ ಬಳಿಗೆ ಎಳೆದುಕೊಂಡನು.

ಅಷ್ಟರಲ್ಲಿ ಒಳಗೆ ಆಟೋ ಬಂದು ನಿಂತ ಸದ್ದು ಕೇಳಿಸಿತು. ಅವನು ಅನುಮಾನದಿಂದ ಹೊರಗೆ ನೋಡಿದನು. ಕೃಷ್ಣ ಒಳಗೆ ಬರುತ್ತಿರುವುದು ಕಂಡಿತು. ಅವಳು ತಕ್ಷಣ ಕರ್ಟನ್ ಹಿಂದೆ ಹೋದಳು.

ಕೃಷ್ಣ ರೂಂ ಒಳಗೆ ಬರುತ್ತಾ 'ಆಟೋ ಹತ್ತುವಾಗ ಫ್ಲೈಟ್ ಡಿಲೇಡ್ ಅಂತ ಮೆಸೇಜ್ ಬಂತು. ಬಂದು ಬಿಟ್ಟೆ. ನಮ್ಮ ಮನೆ ಬಾಗಿಲು ತೆರೆದಿದೆ. ಕಲ್ಯಾಣಿ ಕಾಣಿಸಲಿಲ್ಲ. ಎಲ್ಲಿಗೆ ಹೋದಳು ಅಂತ ನಿನಗೆ ಗೊತ್ತಾ?' ಎಂದನು ಕೃಷ್ಣ. ಆಗ ಕರ್ಟನ್ ಹಿಂದೆ ಯಾರೋ ನಿಂತಿರುವುದನ್ನು ಗಮನಿಸಿ 'ಯಾರದು?' ಎಂದು ಕೇಳಿದನು ಅನುಮಾನದಿಂದ.

ಉತ್ತರ ಬರಲಿಲ್ಲ.

ತೆರೆ ಕೆಳಗಿನಿಂದ ಕಾಲನ್ನು ನೋಡಿ 'ಕಲ್ಯಾಣೀ' ಎಂದನು.

ಗತ್ಯಂತರವಿಲ್ಲದೆ ಹೊರಗೆ ಬಂದಳು. ಅವನ ಮುಖ ಕೆಂಪಗಾಯಿತು.

'ಎಷ್ಟು ದಿನದಿಂದ ನಡೆಯುತ್ತಿದೆ ಇದೆಲ್ಲ?' ಎಂದು ಕೇಳಿದನು. ಅವರಿಬ್ಬರೂ ಮಾತನಾಡಲಿಲ್ಲ.

'ಎಷ್ಟು ದಿನದಿಂದ ನಡೆಯುತ್ತಿದೆ?' ಗಟ್ಟಿಯಾಗಿ ಕಿರುಚಿದನು. ಅವನ ಧ್ವನಿ ಕೋಣೆಯಲ್ಲಿ ಪ್ರತಿಧ್ವನಿಸಿತು.

'ಅಯ್ಯೋ, ನನಗೂ ಇವನಿಗೂ ಯಾವ ಸಂಬಂಧ ಇಲ್ಲರೀ' ಎಂದಳು ಕ್ಷೀಣ ಸ್ವರದಲ್ಲಿ.

ಅಲ್ಲೇ ಇದ್ದ ಪ್ರೇಮ್ ಕಾಮ್ ಆಗಿ 'ಸಂಬಂಧವಿಲ್ಲದಿದ್ದರೆ ನೀವು ಹೊರಗೆ ಹೋದ ತಕ್ಷಣ ನನ್ನ ರೂಂಗ್ಯಾಕೆ ಬರುತ್ತಿದ್ದಳು? ನಿಮ್ಮನ್ನು ನೋಡಿ ಕರ್ಟನ್ ಹಿಂದೆ ಏಕೆ ಅವಿತುಕೊಂಡಳು?' ಎಂದನು.

ಆ ಮಾತು ಕೇಳಿ ಬಿಳುಚಿದ ಮುಖದಿಂದ ಅವನ ಕಡೆ ನೋಡಿದಳು.

'ನಿಮ್ಮಬ್ಬರನ್ನು ಉಳಿಸೋದಿಲ್ಲ' ಕೃಷ್ಣ ಪಿಸ್ತೂಲ್ ಹೊರತೆಗೆದು ಹೇಳಿದನು.

ಅವಳು ಗಾಬರಿಯಿಂದ 'ಬೇಡ, ಬೇಡ' ಎಂದು ಅವನ ಕೈ ಹಿಡಿದುಕೊಂಡಳು.

ಕೃಷ್ಣ ಅವಳನ್ನು ದೂರ ತಳ್ಳಿದನು. ಅವರ ಕೊಸರಾಟದಲ್ಲಿ ಗುಂಡು ಹಾರಿ ಸೀಲಿಂಗ್‌ಗೆ ಬಡಿಯಿತು. ಅದನ್ನು ಊಹಿಸದೇ ಇದ್ದ ಕೃಷ್ಣ ಕ್ಷಣ ಕಾಲ ತಡಬಡಿಸಿದನು. ಪ್ರೇಮ್ ಆ ಅವಕಾಶ ಬಳಸಿಕೊಂಡನು. ರೆಪ್ಪೆ ಬಡಿಯುವಷ್ಟರಲ್ಲಿ ಮುಂದಕ್ಕೆ ಹಾರಿ ಪಿಸ್ತೂಲ್ ಕಿತ್ತು ಕೊಳ್ಳಲು ಪ್ರಯತ್ನಿಸಿದನು.

ಮತ್ತೊಮ್ಮೆ ಬುಲೆಟ್ ಸಿಡಿದ ಶಬ್ದ.

ಆ ನಂತರ ಗಾಢವಾದ ನಿಶ್ಯಬ್ದ.

—17—

ಇಬ್ಬರು ವ್ಯಕ್ತಿಗಳು ಗಫಾರ್‌ಖಾನ್‌ನನ್ನು ಅಂಧಕಾರ ಕೂಪದಿಂದ ಹೊರಗೆ ಎತ್ತಿ ತಂದು ಜೀಪ್ ಹತ್ತಿಸಿದರು. ಅರ್ಧಗಂಟೆ ಪ್ರಯಾಣ ಮಾಡಿದ ಮೇಲೆ ಜೀಪ್ ಒಂದು ನಿರ್ಜನ ಪ್ರದೇಶದಲ್ಲಿದ್ದ ತೋಟದ ಬಳಿ ನಿಂತಿತು. ಅಲ್ಲಿಂದ ಒಳಗೆ ಕರೆದೊಯ್ದರು.

ಅಲ್ಲಿದ್ದನು ಮಿಜ್ರಾಡಿನ್. ಮಡಿಸುವ ಮಂಚದ ಮೇಲೆ ಕುಳಿತು ಚಪಾತಿ ತಿನ್ನುತ್ತಿದ್ದನು. ಅವನನ್ನು ಕಂಡ ಗಫಾರ್‌ಖಾನ್‌ಗೆ ಶಾಕ್ ಆಯಿತು. ಬಾಯಿಂದ ಮಾತು ಹೊರಡಲಿಲ್ಲ. ಗಂಟಲ ಪಸೆ ಆರಿ ಹೋಯಿತು.

'ಆವೋ ದೋಸ್ತ್... ಬೈಠೋ' ಎಂದನು ಮಿಜ್ರಾಡಿನ್ ಎದುರಿಗಿದ್ದ ಸ್ಟೂಲ್ ಕಡೆ ಕೈ ತೋರಿಸುತ್ತ.

'ನೀನು.... ನೀನು' ಎಂದನು ಗಫಾರ್, ತನ್ನ ಕಣ್ಣನ್ನೇ ತಾನು ನಂಬದವನಂತೆ.

'ವಿಷಯ ಅರ್ಥವಾಗದೆ ಆಶ್ಚರ್ಯಪಡುತ್ತಿದ್ದೀಯಾ?'

'ಇಲ್ಲ, ವಿಷಯ ಅರ್ಥವಾಗಿ ವ್ಯಥೆ ಪಡುತ್ತಿದ್ದೇನೆ. ನನ್ನ ಬಾಲ್ಯ ಸ್ನೇಹಿತ ಹೀಗೆ ಬದಲಾಗುತ್ತಾನೆಂದು ತಿಳಿದಿರಲಿಲ್ಲ.'

ಮಿಜ್ರಾಡಿನ್ ನಕ್ಕನು. 'ಇಡೀ ಪ್ರಪಂಚವನ್ನು ಒಂದು ಧರ್ಮದ ಕೆಳಗೆ ತರಬೇಕೆಂದು ನಾವು ಮಾಡುವ ಹೋರಾಟವನ್ನು ನೀನು ಅಪಾರ್ಥ ಮಾಡಿಕೊಂಡರೆ, ಅದು ನಿನ್ನ ಕರ್ಮ'

ಖಾನ್ ಒಂದು ನಿಮಿಷ ಮೌನವಾಗಿದ್ದು 'ಇಡೀ ಪ್ರಪಂಚದಲ್ಲಿ ಒಂದೇ ಮತ ಏಕಿರಬೇಕು?' ಎಂದು ಕೇಳಿದನು.

'ದ್ವೇಷ ಅಸೂಯೆ ಇಲ್ಲದೆ ಶಾಂತಿಯಿಂದ ಬದುಕುವುದಕ್ಕೆ'

'ದೇಶವಿಡೀ ಒಂದೇ ಮತವಿದ್ದರೆ ಜಗಳಗಳಿರುವುದಿಲ್ಲವೇ?'

'ಇರುವುದಿಲ್ಲ'

'ಮತ್ತೆ ಲೆಬನಾನ್ ದೇಶದಲ್ಲಿ ಹಜ್‌ಬುಲ್ಲಾ ಷಿಯಾಗಳು ಸುನ್ನಿಗಳನ್ನು ಏಕೆ ಕೊಲ್ಲುತ್ತಿದ್ದಾರೆ? ಆಫ್ಘನಿಸ್ತಾನ್‌ನಲ್ಲಿ ಸುನ್ನಿಗಳು ಷಿಯಾಗಳನ್ನು ಏಕೆ ಸಾಯಿಸುತ್ತಾರೆ? ಅಷ್ಟೇ ಏಕೆ, ನಮ್ಮ ಪಕ್ಕದ ಪಾಕಿಸ್ತಾನ್‌ನಲ್ಲಿ ಏಕೆ ಸುನ್ನಿ, ಷಿಯಾಗಳ ನಡುವೆ ರಕ್ತಪಾತ ನಡೆದಿದೆ?' ಎಂದು ಕ್ಷಣ ತಡೆದು ನಂತರ 'ಮನುಷ್ಯ ಸಹಜವಾಗಿ ಬದುಕುವುದಕ್ಕೆ ಬೇಕಾಗಿರುವುದು ಮತವಲ್ಲ, ಮಾನವೀಯತೆ' ಎಂದನು.

'ಮಾನವೀಯತೆ ಅನ್ನ ಕೊಡುವುದಿಲ್ಲ' ಖಾಲಿ ತಟ್ಟೆಯನ್ನು ಅನುಚರನ ಕೈಗೆ ಕೊಡುತ್ತ ಹೇಳಿದನು ಮಿಜ್ರಾಡಿನ್.

'ಅಮೆರಿಕಾದಲ್ಲಿ ಅನ್ನ ಇರುತ್ತದೆ, ಆದರೆ ತಿನ್ನುವುದಕ್ಕೆ ಟೈಂ ಇರುವುದಿಲ್ಲ. ಸೊಮಾಲಿಯಾದಲ್ಲಿ ಟೈಂ ಇದೆ, ತಿನ್ನುವುದಕ್ಕೆ ಅನ್ನವಿಲ್ಲ, ಆಫ್ಘನ್‌ನಲ್ಲಿ ಮತವಿದೆ, ಆದರೆ ಶಾಂತಿಯಿಲ್ಲ. ಎಲ್ಲ ಇರುವ ಭಾರತ ದೇಶವನ್ನು ಏಕೋ ಹಾಳು ಮಾಡ್ತಿದ್ದೀರಿ?'

'ಇಂತಹ ಲಕ್ಷ ಮಾತುಗಳನ್ನು ನಾನೂ ಹೇಳಲೇನು?'

ಆಗ ಗಫಾರ್‌ಖಾನ್ ತನ್ನ ಕೈಗಳನ್ನು ಚಾಚಿ 'ಎಲ್ಲಿ, ನಿನ್ನ ಕೈಯನ್ನು ಒಂದು ಸಾರಿ ಕೊಡು' ಎಂದನು.

'ಏತಕ್ಕೆ?' ಮಿಜ್ರಾಡಿನ್ ಕೇಳಿದನು ಅನುಮಾನದಿಂದ.

'ಕೊಡು ಹೇಳುತ್ತೇನೆ'

ಮಿಜ್ರಾಡಿನ್ ತನ್ನ ಕೈಯನ್ನು ಹಿಂದಕ್ಕೆ ಎಳೆದುಕೊಂಡನು. ಹಿಂದೆ ನಿಂತಿದ್ದ ಬಾಡಿಗಾರ್ಡ್ ತುಪಾಕಿ ಎತ್ತಿದಾಗ ಮಿಜ್ರಾಡಿನ್ ಅವನನ್ನು ಗದರಿಸಿದನು.

ಗಫಾರ್‌ಖಾನ್ ಮುಗುಳ್ನಕ್ಕು 'ನೋಡಿದೆಯಾ, ಪ್ರೀತಿಯಿಂದ ನಾನು ಸ್ನೇಹಹಸ್ತ ಚಾಚಿದೆ. ಆದರೆ ಅನುಮಾನದಿಂದ ನೀನು ಕೈ ಹಿಂದಕ್ಕೆ ತೆಗೆದುಕೊಂಡೆ. ಇದೇ ಅನುಮಾನವನ್ನು ನೀವು ಜನರಲ್ಲಿ ಬೆಳೆಸುತ್ತಿದ್ದೀರಿ. ನೀವು ಯಾವಾಗ ಯಾವ ಚರ್ಚ್ ಸಿಡಿಸುತ್ತೀರೋ, ಯಾವಾಗ ಮಸೀದಿಯನ್ನು ಒಡೆದು ಹಾಕ್ತೀರೋ, ಯಾವಾಗ ಗುಡಿಗೆ ಬಾಂಬ್ ಇಡುತ್ತೀರೋ ಗೊತ್ತಿಲ್ಲ' ಎಂದನು.

ಮಿಜ್ರಾಡಿನ್ ಸಿಟ್ಟಿನಿಂದ ಎದ್ದು ನಿಂತು 'ನಿನ್ನ ಸೂಕ್ತಿಗಳನ್ನು ಕೇಳಲಿಕ್ಕೆ ಇಲ್ಲಿಗೆ ಕರೆಸಿಲ್ಲ. ಏನು ನಡೆಯಿತು ಅಂತ ಹೇಳ್ತೀನಿ ಕೇಳು. ನಿನ್ನ ಸಭೆಗೆ ನಮ್ಮ ವಿರೋಧಿಗಳೆಲ್ಲ ಬರುತ್ತಾರೆ ಅಂತ ತಿಳಿದು ಮಾಸ್ಟರ್ ಪ್ಲಾನ್ ಮಾಡಿ ಬಾಂಬ್ ಇಡಿಸಿದೆ. ಮಕ್ಕಳು ಸತ್ತರು. ಕೊಲ್ಯಾಟರಲ್ ಡ್ಯಾಮೇಜ್! ನಿನಗೆ ಅರ್ಧಗಂಟೆ ಟೈಂ ಕೊಡುತ್ತೇನೆ. ಎಲ್ಲ ಇನ್ಫಾರ್ಮರ್‌ಗಳ ಅಡ್ರೆಸ್ ಹೇಳು. ಇಲ್ಲದಿದ್ದರೆ... ಮತ್ತಿನ ಔಷಧಿ ಕೊಡದೇನೇ ನಿನ್ನ ಕಾಲು ಕತ್ತರಿಸುತ್ತೇನೆ. ಯೋಚನೆ ಮಾಡು' ಎಂದು ಅನುಚರರ ಕಡೆ ತಿರುಗಿ 'ನಾಡಿದ್ದಿನವರೆಗೆ ಇವನಿಗೆ ಟೈಂ ಕೊಡಿ' ಎಂದನು.

***

ದಟ್ಟವಾದ ಕಾಡು. ಎತ್ತರವಾಗಿ ಬೆಳೆದಿದ್ದ ಮರಗಳು. ಸಣ್ಣ ಗುಡ್ಡದ ಪಕ್ಕದಲ್ಲಿ ಕುಳಿತಿದ್ದರು ಅವರಿಬ್ಬರೂ. ಅವನ ಪಕ್ಕದಲ್ಲಿ ಪಿಸ್ತೂಲ್ ಇತ್ತು. 'ನನ್ನನ್ನು ಬಿಟ್ಟು ಬಿಡು ಪ್ಲೀಸ್' ಎಂದಳು ಅವಳು.

ಬೀಗ ತೆಗೆದು ನನ್ನ ರೂಂನೊಳಗೆ ಕಳ್ಳತನದಿಂದ ಬಂದೆ. ನನ್ನ ರೂಂ ಇಡೀ ಹುಡುಕಿದೆ. ಆ ಟೈಮ್‌ಗೆ ನಿನ್ನ ಗಂಡ ಬಂದರೆ ಅದು ನನ್ನ ತಪ್ಪೇನು?... ನನ್ನನ್ನೊಬ್ಬ ಕೊಲೆಗಾರನಾಗಿ ಮಾಡಿ, ಈಗ ಬಿಟ್ಟು ಬಿಡು ಅಂತೀಯಲ್ಲ?'

'ನಾನು ನಿನ್ನನ್ನು ಮರ್ಡರ್ ಆಗಿ ಮಾಡಿದೆನಾ? ಸುಖವಾಗಿ ಸಂಸಾರ ಮಾಡಿಕೊಂಡಿದ್ದ ನನ್ನ ಹಿಂದೆ ಬಿದ್ದೆ. ಗಂಡನನ್ನು ಸಾಯಿಸಿದೆ. ಪಿಸ್ತೂಲ್ ತೋರಿಸಿ ಬೆದರಿಸುತ್ತ ಕಾಡಿನೊಳಗೆ ಕರೆದುಕೊಂಡು ಹೋಗ್ತಿದ್ದೀಯ. ಏನು ನಿನ್ನ ಉದ್ದೇಶ?'

'ಉದ್ದೇಶ ಹೇಳಬೇಕಾ? ನೀನು ನನಗೆ ಕವರ್ ಆಗಿರುವಷ್ಟು ಕಾಲ ಪೊಲೀಸರು ನನ್ನ ತಂಟೆಗೆ ಬರುವುದಿಲ್ಲ. ಅಷ್ಟರಲ್ಲಿ ನಾನು ಈ ಸರಹದ್ದು ದಾಟಿ ಹೋಗಿಬಿಡ್ತೀನಿ' ಎಂದನು. ಅಷ್ಟರಲ್ಲಿ ಅವನಿಗೆ ಕಾಲ್ ಬಂದಿತು.

ಆ ಬದಿಯಿಂದ ಸರ್ವೇಶ್ವರ್ 'ನಮ್ಮ